1	2	3	4	5
14.	158	87.60	ಇಲಾಖಾವತಿ	ಪ್ರಾರಂಭಿಸಿ ನಿಲ್ಲಿಸಲಾಗಿದೆ
15.	166	28.50	ಇಲಾಖಾವತಿ	ಶೇಕಡ 50ರಷ್ಟು ಪೂರ್ಣಗೊಂಡಿದೆ
16.	168	95.00	ಇಲಾಖಾವತಿ	ಶೇಕಡ 20ರಷ್ಟು ಪೂರ್ಣಗೊಂಡಿದೆ

ಹೇಮಾವತಿ ಯೋಜನೆಯಿಂದ ಕುಣಿಗಲ್ ಕ್ಷೇತ್ರದಲ್ಲಿ ನೀರಾವರಿಯಾಗುವ ಜಮೀನಿನ ವಿಸ್ತೀರ್ಣ.

267 - ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಣಿಗಲ್ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಹೇಮಾವತಿ ಯೋಜನೆಯಿಂದ ನೀರಾವರಿಯಾಗುವ ಅಂದಾಜು ಪ್ರದೇಶವೆಷ್ಟು, (ವಿಧಾನಸಭಾ ಕ್ಷೇತ್ರದ ವ್ಯಾಪ್ತಿ ಮಾತ್ರ).

ಆ) ನಿರ್ದಿಷ್ಟವಾದ ಆ ಪ್ರದೇಶಗಳಾವುವು?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಸುಮಾರು 30,000 ಎಕರೆ.

ಆ) ತುಮಕೂರು ತಾಲ್ಲೂಕಿನ ಹೆಬ್ಬೂರು, ಹೋಬಳಿ ಕುಣಿಗಲ್ ತಾಲ್ಲೂಕಿನ ಕಸಬಾ ಹೋಬಳಿ ಮತ್ತು ಕೊತ್ತಗೆರೆ ಹೋಬಳಿಗಳ ಭಾಗಶಃ ಪ್ರದೇಶಗಳು ನೀರಾವರಿ ಸೌಲಭ್ಯಕ್ಕೆ ಒಳಪಡುತ್ತವೆ.

ಕುಂದಾಪುರ ತಾಲ್ಲೂಕಿನಲ್ಲಿ ಸಿ.ಓ.ಡಿ.ಗೆ ವಹಿಸಲಾದ ಪ್ರಕರಣಗಳು.

269 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 3 ವರ್ಷಗಳಿಂದ ಕುಂದಾಪುರ ತಾಲ್ಲೂಕಿನ ಎಷ್ಟು ಪ್ರಕರಣಗಳನ್ನು ಸಿಓಡಿ ಗೆ ವಹಿಸಲಾಗಿದೆ? (ವರ್ಷವಾರು ವಿವರ)

ಆ) ಸಿಓಡಿಯವರು ಎಷ್ಟು ಪ್ರಕರಣಗಳಿಗೆ ಆರೋಪ ಪಟ್ಟಿ ಸಲ್ಲಿಸಿದ್ದಾರೆ.

ಇ) ಉಳಿದ ಪ್ರಕರಣಗಳನ್ನು ತನಿಖೆ ಮಾಡಲು ಸಿಓಡಿ ಅಧಿಕಾರಿಗಳು ಕುಂದಾಪುರಕ್ಕೆ. ಎಷ್ಟು ಬಾರಿ ಭೇಟಿ ಕೊಟ್ಟಿದ್ದಾರೆ, (ತನಿಖೆಗಾಗಿ ಬಂದ ಪ್ರಕರಣ ತಾರೀಖು ಮತ್ತು ತಂಗಿದ ಸ್ಥಳ)

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :

ಅ) ಐದು ಪ್ರಕರಣಗಳು.